# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ: ತುವಿ:ವಿ.ವಿ.ಪ/ಸಿಂ.ವಿ:2023-24/1864 ದಿನಾಂಕ: 16.08.2023

## ಸುತ್ತೋಲೆ

ವಿಷಯ: ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿದ್ದು, ಆಕ್ಷೇಪಣೆ ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ: 1) ಈ ಕಚೇರಿ ಸುತ್ತೋಲೆ ಸಂಖ್ಯೆ: ತುವಿ:ವಿ.ವಿ.ಪ/ಸಿಂ.ವಿ:2023-24/735, ದಿನಾಂಕ: 07.06.2023
2) ನೆನಪೋಲೆ ಸಂಖ್ಯೆ: ತುವಿ:ವಿ.ವಿ.ಪ/ಸಿಂ.ವಿ:2023-24/1232, ದಿನಾಂಕ: 04.07.2023
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 15.08.2023

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28(1) (ಎಫ್)ರಲ್ಲಿ ಸಂಯೋಜಿತ ಕಾಲೇಜುಗಳ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನಾಲ್ಕು ಪ್ರಾಂಶುಪಾಲರನ್ನು ಸಿಂಡಿಕೇಟ್‌ಗೆ ಮತ್ತು 30 (1) (vi) ರಲ್ಲಿ ಹತ್ತು ಪ್ರಾಂಶುಪಾಲರುಗಳನ್ನು ವಿದ್ಯಾವಿಷಯಕ ಪರಿಷತ್‌ಗೆ ನಾಮನಿರ್ದೇಶನ ಮಾಡುವ ಸಂಬಂಧ ಜೇಷ್ಠತಾ ಪಟ್ಟಿಯನ್ನು ಸಲ್ಲಿಸುವಂತೆ ಉಲ್ಲೇಖ (1) ಮತ್ತು (2)ರಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಈ ಸಂಬಂಧ ಕಾಲೇಜಿನ ಪ್ರಾಂಶುಪಾಲರುಗಳು ಸಲ್ಲಿಸಿರುವ ಮಾಹಿತಿಯನ್ನು ಆಧರಿಸಿ ದಿನಾಂಕ 04.08.2023ಕ್ಕೆ ಇರುವಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ ಈ ಸುತ್ತೋಲೆಯೊಂದಿಗೆ ಕಳುಹಿಸಲಾಗಿದೆ. ಸದರಿ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲು ಅನುಸರಿಸಿರುವ ಮಾರ್ಗಸೂಚಿಗಳು ಈ ಕೆಳಕಂಡಂತಿವೆ.

a) The Principals who served longer length of service are treated as senior to those who served lesser number of years of service in the cadre of principals.
b) Principals should be drawing UGC or equivalent running pay scale of Rs.1,31,400-2,17,100 or Rs.1,44,200-2,18,200 (as per Seventh Pay Scale).
c) Where the relative seniority is same it will be determined on the basis of the date of birth.
d) The Principals, who have attained the age of superannuation, temporary, drawing the pay scale less than Rs.1,31,400-2,17,100 or Rs.1,44,200-2,18,200 are not eligible for inclusion of their name in the Seniority list.
e) The period of nomination as prescribed under KSU Act 2000.

ಅಂತಿಮವಾಗಿ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಜೇಷ್ಠತೆ ಮತ್ತು ಸರದಿಯ ಆಧಾರದ ಮೇಲೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 28(1) (ಎಫ್) ಮತ್ತು 30 (1) (vi) ರನ್ವಯ ಸಕ್ಷಮ ಪ್ರಾಧಿಕಾರಗಳಿಗೆ ನಾಮನಿರ್ದೇಶನ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಬಗ್ಗೆ ಯಾವುದಾದರು ಬದಲಾವಣೆ / ಸೇರ್ಪಡೆ / ಆಕ್ಷೇಪಣೆಗಳಿದ್ದಲ್ಲಿ (ಮೇಲಿನ ಮಾರ್ಗಸೂಚಿಗಳನ್ವಯ) ದಿನಾಂಕ 22.08.2023ರ ಮಂಗಳವಾರ ಅಪರಾಹ್ನ 4.00 ಗಂಟೆಯೊಳಗಾಗಿ ಲಿಖಿತ ರೂಪದಲ್ಲಿ ಉಪಕುಲಸಚಿವರು, ಸಿಂಡಿಕೇಟ್ / ವಿದ್ಯಾವಿಷಯಕ ಪರಿಷತ್ ವಿಭಾಗ ಇವರಿಗೆ ಸಲ್ಲಿಸಬಹುದಾಗಿದೆ ಮತ್ತು ಸಾಫ್ಟ್ ಪ್ರತಿಯನ್ನು ಇ-ಮೇಲ್ ಐಡಿ drsyndicatetut@gmail.com ಇಲ್ಲಿಗೆ ಕಳುಹಿಸಲು ಕೋರಿದೆ. ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರುಗಳು, ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸರ್ಕಾರಿ ಮತ್ತು ಅನುದಾನಿತ / ಖಾಸಗಿ ಸಂಯೋಜಿತ ಕಾಲೇಜುಗಳು.

ಪ್ರತಿಗಳು:

1) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಸುತ್ತೋಲೆಯನ್ನು ಎಲ್ಲಾ ಪ್ರಾಂಶುಪಾಲರುಗಳಿಗೆ ಇ-ಮೇಲ್ ಮೂಲಕ ಕಳುಹಿಸುವುದು.
3) ಕಚೇರಿ ಪ್ರತಿ.